# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 28.04.2018 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು:**

| | |
|---|---|
| 1. **ಪ್ರೊ. ಕೆ. ಭೈರಪ್ಪ**<br>ಕುಲಪತಿಗಳು<br>ಮಂಗಳೂರು ವಿಶ್ವವಿದ್ಯಾನಿಲಯ,<br>**ಮಂಗಳಗಂಗೋತ್ರಿ–574 199.** | ಅಧ್ಯಕ್ಷರು |
| 2. **ಶ್ರೀ ಮಹೇಶ್ ರಾವ್.**<br>ಜಂಟಿ ನಿರ್ದೇಶಕರು<br>ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಚೇರಿ, ಮಂಗಳೂರು<br>(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು |
| 3. **ಡಾ. ಈಶ್ವರ ಪಿ.**<br>ಡೀನರು, ವಾಣಿಜ್ಯ ನಿಕಾಯ<br>ಮತ್ತು ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ<br>ಮಂಗಳೂರು ವಿಶ್ವವಿದ್ಯಾನಿಲಯ<br>**ಮಂಗಳಗಂಗೋತ್ರಿ–574 199.** | – " – |
| 4. **ಶ್ರೀ ಅಶೋಕ್ ಕುಮಾರ್ ರೈ,**<br>"ಅನುರಾಗ್", ಡಿ. ನಂ.–2–30–2484/1<br>ಕಾಸ್ಮಸ್ ಲೇನ್, ಕದ್ರಿ ಕಂಬ್ಳ, **ಮಂಗಳೂರು** | – " – |
| 5. **ಪ್ರೊ. ಸತ್ಯನಾರಾಯಣ ಭಟ್,**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು ,<br>ಸಿದ್ಧಕಟ್ಟೆ, **ಬಂಟ್ವಾಳ – 574 237.** | – " – |
| 6. **ಪ್ರೊ. ಬಿ. ರಹಮತ್ ಅಲಿ**<br>ಪ್ರಾಂಶುಪಾಲರು, ಬದ್ರಿಯಾ ಪ್ರಥಮ ದರ್ಜೆ ಕಾಲೇಜು<br>ಕಂದಕ, **ಮಂಗಳೂರು – 575 001** | – " – |
| 7. **ಪ್ರೊ. ಗಣಪತಿ ಭಟ್**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು,<br>**ಪೂಂಜಾಲಕಟ್ಟೆ – 574 233** | – " – |
| 8. **ಡಾ. ಯು. ತಾರಾ ರಾವ್,**<br>ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು,<br>ಕಾವೂರು **ಮಂಗಳೂರು – 575 015.** | – " – |
| 9. **ಶ್ರೀ ವಿಕ್ಟರ್ ವಾಲ್ಟರ್ ನರೋನ್ನಾ**<br>ಬಿನ್ ಡೊಮಿನಿಕ್ ರೊಸಾರಿಯೋ ನರೋನ್ನ<br>ಸೊರ್ನಾಡು ಮನೆ ಮತ್ತು ಅಂಚೆ,<br>ಪಂಜಿಕಲ್ಲು ಗ್ರಾಮ,<br>**ಬಂಟ್ವಾಳ ತಾಲೂಕು – 574 211** | – " – |
| 10. **ಕು. ಸೌಮ್ಯ ಸಂಜೀವ,**<br>ಬಿನ್ ಸಂಜೀವ ಗುರಿಕಾರ<br>ಬಿಕೋ ಕಂಪನಿ ಹತ್ತಿರ, ಕೋತಲಕಟ್ಟೆ<br>ಉಳಿಯಾರಗೋಳಿ ಗ್ರಾಮ, ಕಾಪು ಅಂಚೆ,<br>**ಉಡುಪಿ ಜಿಲ್ಲೆ – 574 106** | – " – |

11. **ಡಾ. ಭಾರ್ಗವಿ ಡಿ. ಹೆಮ್ಮಿಗೆ,** – " –
ನಂ. 555/N, ಇಂದ್ರಪ್ರಸ್ಥ,
ನ್ಯೂ ಕಾಂತರಾಜ್ ರಸ್ತೆ, ಕುವೆಂಪು ನಗರ,
**ಮೈಸೂರು 570 009**

12. **ಶ್ರೀ ಬಾದ್‌ಷ ಸಾಂಬಾರತೋಟ,** – " –
ಪಜೀರು ಗ್ರಾಮ, ಕುರ್ನಾಡು ಅಂಚೆ
ಬಂಟ್ವಾಳ ತಾಲೂಕು, **ಮಂಗಳೂರು 574153**

13. **ಶ್ರೀ ಟಿ. ನಾರಾಯಣ ಗೌಡ** – " –
ಪ್ರಾಂಶುಪಾಲರು
ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ
**ದಕ್ಷಿಣ ಕನ್ನಡ, ಮಂಗಳೂರು** 575001.
(ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ)

14. **ಪ್ರೊ. ಎ. ಎಂ. ಖಾನ್** – " –
ಕುಲಸಚಿವರು (ಪರೀಕ್ಷಾಂಗ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

15. **ಪ್ರೊ. ಬಿ. ಎಸ್. ನಾಗೇಂದ್ರ ಪ್ರಕಾಶ್** – " –
ಕುಲಸಚಿವರು (ಆಡಳಿತ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

**ವಿಶೇಷ ಆಹ್ವಾನಿತರು:**

16. **ಡಾ. ದಯಾನಂದ ನಾಯ್ಕ್** – " –
ಹಣಕಾಸಿನ ಅಧಿಕಾರಿ (ಪ್ರಭಾರ)
ಮಂಗಳೂರು ವಿಶ್ವವಿದ್ಯಾನಿಲಯ
**ಮಂಗಳಗಂಗೋತ್ರಿ–574 199.**

**ಅನುಪಸ್ಥಿತ ಸದಸ್ಯರು:**

1. **ತಾಂತ್ರಿಕ ಶಿಕ್ಷಣ ನಿರ್ದೇಶಕರು** **ಸದಸ್ಯರು**
ಕರ್ನಾಟಕ ರಾಜ್ಯ
ಅರಮನೆ ರಸ್ತೆ, **ಬೆಂಗಳೂರು – 560 001.**

2. **ಶ್ರೀ ಹರೀಶ್ ಆಚಾರ್,** – " –
ಬಿನ್ ರಾಘವ ಆಚಾರ್,
"ರಕ್ಷಾ", ವಿ.ಎಸ್.ಎಸ್. ಬ್ಯಾಂಕಿನ ಹತ್ತಿರ,
ನಾಗುರಿ, ಕಂಕನಾಡಿ –575 002, **ಮಂಗಳೂರು.**

3. **ಶ್ರೀ ತೇಜಸ್ವಿ ರಾಜ್** – " –
ಬಿನ್ ಗಂಗಾಧರ್, ನಂ. 602,
ಕ್ಲಾಸಿಕ್ ಹೈಟ್ಸ್ ಅಪಾರ್ಟ್‌ಮೆಂಟ್, ಬಿಜೈ,
**ಮಂಗಳೂರು – 575 005**

4. **ವೈದ್ಯಕೀಯ ಶಿಕ್ಷಣ ನಿರ್ದೇಶಕರು** – " –
ಕರ್ನಾಟಕ ರಾಜ್ಯ, ಆನಂದರಾವ್ ವೃತ್ತ
**ಬೆಂಗಳೂರು – 560 009.**

5. **ನಿರ್ದೇಶಕರು**
ಪದವಿ ಪೂರ್ವ ಶಿಕ್ಷಣ ಇಲಾಖೆ
ಪದವಿ ಪೂರ್ವ ಶಿಕ್ಷಣ ಭವನ, – " –
18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ
ಮಲ್ಲೇಶ್ವರಂ, **ಬೆಂಗಳೂರು 560 003.**

*********

## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 28.04.2018 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2018ನೇ ಸಾಲಿನ ತೃತೀಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು**

**ಅನುಪಸ್ಥಿತ ಸದಸ್ಯರು:**

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**I ನಡಾವಳಿಗಳ ದೃಢೀಕರಣ**

1. ದಿನಾಂಕ 13.03.2018ರಂದು ನಡೆದ 2018ನೇ ಸಾಲಿನ ದ್ವಿತೀಯ ವಿಶೇಷ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.
2. ದಿನಾಂಕ 26.03.2018ರಂದು ನಡೆದ 2018ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ**

ದಿನಾಂಕ 31.01.2018 ಮತ್ತು ಅದರ ಮುಂದುವರಿದ ಸಭೆ ದಿನಾಂಕ 20.02.2018ರಂದು ನಡೆದ 2018ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ3:1(2018)

**ವಿಷಯ:** ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ ಶೈಕ್ಷಣಿಕ ವರ್ಷ 2018–19ನೇ ಸಾಲಿನಿಂದ ಪದವಿ ಮಟ್ಟದಲ್ಲಿ ಹಿಂದಿಯನ್ನು ಐಚ್ಛಿಕ ವಿಷಯವನ್ನಾಗಿ ಪ್ರಾರಂಭಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ3:2(2018)

**ವಿಷಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ ಶೈಕ್ಷಣಿಕ ವರ್ಷ 2018–19ನೇ ಸಾಲಿನಿಂದ ಅನುದಾನ ಆಯೋಗದ ವೃತ್ತಿ ಆಧಾರಿತ ಕೋರ್ಸ್ Vermi Technology ಕೋರ್ಸ್‌ನ್ನು ಪ್ರಾರಂಭಿಸುವ ಕುರಿತು.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ3:3(2018)

**ವಿಷಯ:** ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಪಿಎಚ್.ಡಿ. ವ್ಯಾಸಂಗದ ಶುಲ್ಕವನ್ನು ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಪಿಎಚ್.ಡಿ. ವ್ಯಾಸಂಗದ ಪ್ರಸ್ತಾವಿತ ಶುಲ್ಕಗಳ ತಃಖ್ತೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡೀಇವಿ ಸಾ.ಸ3:4(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ "MCJ Silver Jubilee Year Cash Prize" ನಗದು ಬಹುಮಾನ ದತ್ತಿನಿಧಿ ಸ್ಥಾಪನೆ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ3:5(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ SPARSH Cell ನ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ.

**ನಿರ್ಣಯ:** ಮುಂದೂಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:6(2018)

**ವಿಷಯ:** ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ – ಶ್ರೀಮತಿ ನಿರ್ಮಲ ಆರ್. ಇವರ ಮನವಿ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ನಿರಾಕರಿಸಲಾಯಿತು. ಸಿಂಡಿಕೇಟು ಸಭೆಯು ಶ್ರೀಮತಿ ನಿರ್ಮಲ ಆರ್. ಇವರ ಮನವಿಯನ್ನು ಸುದೀರ್ಘವಾಗಿ ಚರ್ಚಿಸಿ ವಿಶ್ವವಿದ್ಯಾನಿಲಯದ ಹಿತ ಮತ್ತು ಆರೋಗ್ಯಕರ ಬೆಳವಣಿಗೆಯ ದೃಷ್ಟಿಯಿಂದ

ಇಂತಹ ಬೇಡಿಕೆಗಳನ್ನು ಪ್ರೋತ್ಸಾಯಿಸಬಾರದೆಂದು ಹಾಗೂ ಕನಿಷ್ಠ 10 ವರ್ಷಗಳು ವಿಶ್ವವಿದ್ಯಾನಿಲಯದಲ್ಲಿ ಅದೇ ಹುದ್ದೆಯಲ್ಲಿ ಸೇವೆ ಸಲ್ಲಿಸಬೇಕೆಂದು ನಿರ್ಣಯಿಸಿತು.

ಇನ್ನು ಮುಂದೆ ಇಂತಹ ಬೇಡಿಕೆಗಳನ್ನು ಪರಿಶೀಲಿಸಲು ಈ ಕೆಳಕಂಡ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸಲು ನಿರ್ಧರಿಸಲಾಯಿತು.

1. ಶ್ರೀಮತಿ ತಾರಾ ರಾವ್ – ಅಧ್ಯಕ್ಷರು
   ಮಾನ್ಯ ಸಿಂಡಿಕೇಟು ಸದಸ್ಯರು
2. ಶ್ರೀ ಅಶೋಕ್ ಕುಮಾರ್ ರೈ – ಸದಸ್ಯರು
   ಮಾನ್ಯ ಸಿಂಡಿಕೇಟು ಸದಸ್ಯರು
3. ಶ್ರೀ ಎಂ.ಪಿ.ನರೋನ್ಹ – ಸದಸ್ಯರು
   ಮಾನ್ಯ ಶೈಕ್ಷಣಿಕ ಮಂಡಳಿ ಸದಸ್ಯರು
4. ಡೀನರು – ಸದಸ್ಯರು
   ಕಲಾ, ವಾಣಿಜ್ಯ, ವಿಜ್ಞಾನ ಮತ್ತು
   ತಂತ್ರಜ್ಞಾನ ಮತ್ತು ಶಿಕ್ಷಣ ನಿಕಾಯ

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:7(2018)

**ವಿಷಯ:** ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ – ಡಾ. ರಮೇಶ್ ಸಾಬು ಗಣಿ ಇವರ ಮನವಿ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ನಿರಾಕರಿಸಲಾಯಿತು. ಈಗಾಗಲೇ ಮೇಲಿನ ಕಾರ್ಯಸೂಚಿಯಲ್ಲಿ ನಿರ್ಣಯಿಸಿದಂತೆ ಸಮಿತಿಯನ್ನು ರಚಿಸಿ ಬೇಡಿಕೆಯನ್ನು ಪರಿಶೀಲಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:8(2018)

**ವಿಷಯ:** ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆ – ಡಾ. ಪ್ರಸನ್ನ ಬಿ. ಕೆ., ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕರು ಇವರ ಮನವಿ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ನಿರಾಕರಿಸಲಾಯಿತು. ಈಗಾಗಲೇ ಮೇಲಿನ ಕಾರ್ಯಸೂಚಿಯಲ್ಲಿ ನಿರ್ಣಯಿಸಿದಂತೆ ಸಮಿತಿಯನ್ನು ರಚಿಸಿ ಬೇಡಿಕೆಯನ್ನು ಪರಿಶೀಲಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:9(2018)

**ವಿಷಯ:** ಶ್ರೀ ಸುಬ್ರಮಣ್ಯ ಕೆ., ಇವರ ಪಿಹೆಚ್.ಡಿ. ಪ್ರಬಂಧ ಮೌಲ್ಯಮಾಪನಕ್ಕೆ ಸಂಬಂಧಪಟ್ಟಂತೆ ಅವ್ಯವಹಾರ ನಡೆದಿರುವ ಕುರಿತು ಉಂಟಾದ ಗೊಂದಲದ ಬಗ್ಗೆ ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿಯ ವರದಿಯನುಸಾರ ಮುಂದಿನ ಕ್ರಮ ಕೈಗೊಳ್ಳುವ ಬಗ್ಗೆ.

**ನಿರ್ಣಯ:** ಸಿಂಡಿಕೇಟು ಸಭೆಯು, ಡಾ.ದೇವೇಂದ್ರಪ್ಪ ಹೆಚ್, ಸಹ ಪ್ರಾಧ್ಯಾಪಕರು, ಭೌತಶಾಸ್ತ್ರ ವಿಭಾಗ, ಇವರು ಸಲ್ಲಿಸಿರುವ ಸಮಜಾಯಿಷಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಬಗ್ಗೆ ತನಿಖೆ ನಡೆಸಲು ತೀರ್ಮಾನಿಸಿ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ತನಿಖಾ ಸಮಿತಿಯನ್ನು ರಚಿಸಿತು.

1. ಡೀನರು, ವಿಜ್ಞಾನ ನಿಕಾಯ – ಅಧ್ಯಕ್ಷರು
2. ಡಾ.ಭಾರ್ಗವಿ ಡಿ.ಹೆಮ್ಮಿಗೆ – ಸದಸ್ಯರು
   ಮಾನ್ಯ ಸಿಂಡಿಕೇಟು ಸದಸ್ಯರು
3. ಡಾ.ಯು.ತಾರಾ ರಾವ್ – ಸದಸ್ಯರು
   ಮಾನ್ಯ ಸಿಂಡಿಕೇಟು ಸದಸ್ಯರು
4. ಶ್ರೀ ಕೆ. ರಾಜೇಂದ್ರ ಕುಮಾರ್ – ಮಂಡನಾಧಿಕಾರಿ
   ಅಧೀಕ್ಷಕರು, ಕುಲಸಚಿವ (ಪರೀಕ್ಷಾಂಗ) ವಿಭಾಗ

ಸದರಿ ಸಮಿತಿಯು ತನಿಖೆ ನಡೆಸಿ ಹದಿನೈದು ದಿನಗಳೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ವರದಿಯನ್ನು ಸಲ್ಲಿಸುವಂತೆ ಸೂಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:10(2018)

**ವಿಷಯ:** ಡಾ. ಎಂ. ಜಯಶಂಕರ್, ಪ್ರಾಧ್ಯಾಪಕರು, ಸೂಕ್ಷ್ಮಾಣು ಜೀವ ವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರ ಮೇಲಿನ ದೂರುಗಳ ಬಗ್ಗೆ ನಡೆಸಿದ ಇಲಾಖಾ ವಿಚಾರಣೆಯ ವರದಿಯ ಮೇಲೆ ಸಮಜಾಯಿಷಿಕೆ ನೀಡುವ ಬಗ್ಗೆ.

**ನಿರ್ಣಯ:** ಸದರಿಯವರ ಮೇಲಿನ ಇಲಾಖಾ ವಿಚಾರಣಾ ವರದಿಯನ್ನು ವಿಸ್ತೃತವಾಗಿ ಚರ್ಚಿಸುವ ಸಲುವಾಗಿ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ3:11(2018)

**ವಿಷಯ:** ಪದವಿ ಮಟ್ಟದ ಬಿ.ಎಸ್ಸಿ. (ಹಾಸ್ಪಿಟಾಲಿಟಿ ಸೈನ್ಸ್) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ3:12(2018)

**ವಿಷಯ:** ಪದವಿ ಮಟ್ಟದ ಮಾನವ ಸಂಪನ್ಮೂಲ ಅಭಿವೃದ್ಧಿ BA(HRD) ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ3:13(2018)

**ವಿಷಯ:** ಹಣಕಾಸು ಸಮಿತಿಗೆ ಸಿಂಡಿಕೇಟ್‌ನಿಂದ ಓರ್ವ ಸದಸ್ಯರ ನಾಮನಿರ್ದೇಶನದ ಬಗ್ಗೆ.

**ನಿರ್ಣಯ:** ಹಣಕಾಸು ಸಮಿತಿಗೆ ಸಿಂಡಿಕೇಟ್‌ನಿಂದ ಓರ್ವ ಸದಸ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ3:14(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರುಗಳ ನೇಮಕಾತಿ ಬಗ್ಗೆ.

**ನಿರ್ಣಯ:** ವಿಭಾಗವಾರು ಶಿಕ್ಷಕರ ಪಟ್ಟಿಯಲ್ಲಿ ನಮೂದಿಸಿದಂತೆ ದಿನಾಂಕ 01.07.2018ರಿಂದ ಅನ್ವಯವಾಗುವಂತೆ ಎರಡು ವರ್ಷಗಳ ಅವಧಿಗಾಗಿ ಅಥವಾ ಮುಂದಿನ ಆದೇಶದವರೆಗೆ ವಿಭಾಗಗಳ ಅಧ್ಯಕ್ಷರುಗಳನ್ನು ನೇಮಕಾತಿ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ3:15(2018)

**ವಿಷಯ:** ಸ್ನಾತಕೋತ್ತರ ಮೆಡಿಕಲ್ ಫಿಸಿಕ್ಸ್ (Medical Physics) ಅಧ್ಯಯನ ಮಂಡಳಿಯನ್ನು ರಚಿಸುವ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:16(2018)

**ವಿಷಯ:** ಡಾ. ಕೆ. ಎಂ. ಲೋಕೇಶ್, ಪ್ರಾಧ್ಯಾಪಕರು, ಇತಿಹಾಸ ವಿಭಾಗ ಹಾಗೂ ಡಾ. ಪರಿಣಿತಾ, ಪ್ರಾಧ್ಯಾಪಕರು ಆಂಗ್ಲ ವಿಭಾಗ ಇವರಿಗೆ ಸಬ್ಬ್ಯಾಟಿಕಲ್ ರಜೆ ಮಂಜೂರಾತಿ ಮಾಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:17(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 33ನೇ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾದ ಪದವಿ, ಸ್ನಾತಕೋತ್ತರ ಹಾಗೂ ಪಿಹೆಚ್.ಡಿ. ಪ್ರಮಾಣ ಪತ್ರಗಳಲ್ಲಿ ಮುದ್ರಣ ದೋಷಗಳ ಕುರಿತು.

**ನಿರ್ಣಯ:** ಸಭೆಯು ಈ ವಿಷಯದ ಬಗ್ಗೆ ಗಂಭೀರವಾಗಿ ಚರ್ಚಿಸಿ, ಇದು ವಿಶ್ವವಿದ್ಯಾನಿಲಯದ ಘನತೆಗೆ ಧಕ್ಕೆಯನ್ನುಂಟು ಮಾಡಿದ್ದು ಸಾರ್ವಜನಿಕರಲ್ಲಿ ವಿಶ್ವವಿದ್ಯಾನಿಲಯದ ಬಗ್ಗೆ ಇರುವ ಗೌರವವನ್ನು ಕುಂಠಿತಗೊಳಿಸಿದೆ. ತನಿಕಾಧಿಕಾರಿಗಳಾದಂತಹ ನಿವೃತ್ತ ನ್ಯಾಯಾಧೀಶರು ಈ ವಿಷಯವನ್ನು ತಮ್ಮ ತನಿಖಾ ವರದಿಯಲ್ಲಿ ಈ ದೋಷಗಳನ್ನು ಗಂಭೀರವಾಗಿ ಪರಿಗಣಿಸಿರುತ್ತಾರೆ. ಇದರ ಸಾಧಕ ಬಾಧಕ ಮತ್ತು ಸೂಕ್ಷ್ಮತೆಯನ್ನು ಮನಗಂಡು ಎಲ್ಲಾ ತಪ್ಪಿತಸ್ಥರಿಗೆ ಪ್ರತ್ಯೇಕವಾಗಿ ಮತ್ತೊಮ್ಮೆ ಇಂಥಹ ತಪ್ಪು ಮರುಕಳಿಸದಂತೆ ಎಚ್ಚರಿಕೆ ಪತ್ರ ನೀಡುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪರೀಕ್ಷಾಂಗ ಸಾ.ಸ3:18(2018)

**ವಿಷಯ:** ಅಕ್ಟೋಬರ್ / ನವೆಂಬರ್ 2017ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ:** ತನಿಖಾ ಸಮಿತಿಯ ಶಿಫಾರಸ್ಸಿನಂತೆ ಪ್ರಸ್ತಾಪಿಸಲಾದ ದಂಡನೆಯನ್ನು ದೃಢೀಕರಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಪ.ಜಾ.ಪ.ಪಂ.ಘಟಕ ಸಾ.ಸ3:19(2018)

**ವಿಷಯ:** ಶ್ರೀ ಸಂತೋಷ್ ಚೌಗಲೆ, ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಸಾಗರ ಭೂ ವಿಜ್ಞಾನ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಹಾಗೂ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ3:20(2018)

**ವಿಷಯ:** ಸರಕಾರಿ ಪ್ರಥಮ ದರ್ಜೆ ಕಾಲೇಜು ಬೆಟ್ಟಂಪಾಡಿ – ಕಾಲೇಜನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನಾಗಿ ಪರಿಗಣಿಸುವ ಬಗ್ಗೆ.

**ನಿರ್ಣಯ:** ಸದರಿ ಕಾಲೇಜನ್ನು ವಿಶ್ವವಿದ್ಯಾನಿಲಯದ ಘಟಕ ಕಾಲೇಜನ್ನಾಗಿ ಪರಿಗಣಿಸುವ ಸಂಬಂಧ ತಜ್ಞರ ಸಮಿತಿಯ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿ ಜಾರಿಗೆ ತರಬಹುದಾದ ಶೈಕ್ಷಣಿಕ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುವುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ3:21(2018)

**ವಿಷಯ:** ಗಣಕಯಂತ್ರ ಕೇಂದ್ರದ ಸೈಬರ್ ಲ್ಯಾಬ್‌ಗೆ ಅಗತ್ಯವಿರುವ 5 KVA UPS ಮತ್ತು 10 ಸಂಖ್ಯೆಯ ಬ್ಯಾಟರಿಗಳನ್ನು ವಿಶ್ವವಿದ್ಯಾನಿಲಯದ ಧಾರಣಾಗುತ್ತಿಗೆ ದರದಲ್ಲಿ ಖರೀದಿಸಲು ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಧಾರಣಾಗುತ್ತಿಗೆ ದರದಲ್ಲಿ ಖರೀದಿಸುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. ಮತ್ತು 7.5 KVA UPS ಅನ್ನು ಕುಲಸಚಿವರು (ಪರೀಕ್ಷಾಂಗ) ವಿಭಾಗಕ್ಕೆ ಒದಗಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಡಿಇವಿ ಸಾ.ಸ3:22(2018)

**ವಿಷಯ:** DST–FIST ಪ್ರಾಜೆಕ್ಟ್, ಸಾಗರ ಭೂ ವಿಜ್ಞಾನ ವಿಭಾಗ – FTIR Spectrophotometer with ATR and Diffuse Reflectance Attachment ಉಪಕರಣ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಖರೀದಿ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ3:23(2018)

**ವಿಷಯ:** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ MA (History and Archeology) ಕೋರ್ಸು ಪ್ರಾರಂಭಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಎಸಿಸಿ ಸಾ.ಸ3:24(2018)

**ವಿಷಯ:** ಶೈಕ್ಷಣಿಕ ವರ್ಷ 2018–19ನೇ ಸಾಲಿಗೆ ಶ್ರೀ ದೇವಿ ಕಾಲೇಜು, ಮಂಗಳೂರು ಎಂಬ ವಿದ್ಯಾ ಸಂಸ್ಥೆಗೆ ವಿಸ್ತರಣಾ ಸಂಯೋಜನೆ ನೀಡುವ ಬಗ್ಗೆ.

**ನಿರ್ಣಯ:** ಸ್ಥಳೀಯ ವಿಚಾರಣಾ ಸಮಿತಿಯ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಶೈಕ್ಷಣಿಕ ಮಂಡಳಿಯ ಅನುಮೋದನೆಯ ನಿರೀಕ್ಷೆ ಮೇರೆಗೆ ಸ್ಥಳೀಯ ವಿಚಾರಣಾ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಂಡಿಕೇಟು ಸಾ.ಸ3:25(2018)

**ವಿಷಯ:** ಸ್ನಾತಕೋತ್ತರ ಸಂಖ್ಯಾಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ.

**ನಿರ್ಣಯ:** ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:26(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮ ಪಾಲನಾ ನಿರ್ದೇಶಕ ಹುದ್ದೆಯ ಪ್ರಭಾರವನ್ನು ನೀಡಿರುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:27(2018)

**ವಿಷಯ:** ರಾಜ್ಯ ಸರಕಾರದ 2018ರ ಪರಿಷ್ಕೃತ ವೇತನ ಶ್ರೇಣಿಗಳನ್ನು ಹಾಗೂ ಸಂಬಂಧಿಸಿದ ಆದೇಶಗಳನ್ನು ರಾಜ್ಯ ವೇತನ ಶ್ರೇಣಿಯಲ್ಲಿರುವ ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳಿಗೆ ವಿಸ್ತರಿಸುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:28(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಖಾಲಿಯಿರುವ ವಿವಿಧ ವೃಂದದ ಬೋಧಕೇತರ ಹುದ್ದೆಗಳಿಗೆ ಪರಿಷ್ಕೃತ ಜೇಷ್ಠತಾ ಪಟ್ಟಿಗಳಿಗೆ ಅನುಗುಣವಾಗಿ ಭಡ್ತಿ ನೀಡಿರುವ ಬಗ್ಗೆ.

**ನಿರ್ಣಯ:** ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:29(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಸೇವೆ ಸಲ್ಲಿಸಿ ಖಾಯಂಗೊಂಡಿರುವ 17 ಮಂದಿ ಬೋಧಕೇತರ ಸಿಬ್ಬಂದಿಗಳಿಗೆ ಸೇವಾ ಸೌಲಭ್ಯಗಳನ್ನು ವಿಸ್ತರಿಸಿರುವ ಬಗ್ಗೆ.

**ನಿರ್ಣಯ:** ತಾತ್ಕಾಲಿಕ ನೆಲೆಯಲ್ಲಿ ಸೇವೆ ಸಲ್ಲಿಸಿ ಖಾಯಂಗೊಂಡಿರುವ 17 ಮಂದಿ ಬೋಧಕೇತರ ಸಿಬ್ಬಂದಿಗಳಿಗೆ ಹೆಚ್ಚುವರಿಯಾಗಿ ವೇತನ ಪಾವತಿಸಿರುವ ಬಗ್ಗೆ ಲೆಕ್ಕಪರಿಶೋಧನಾ ಆಕ್ಷೇಪಣೆಗಳು ಆಗುವ ಸಂಭವವಿರುವುದರಿಂದ ಪಾವತಿಸಿದ ಮೊತ್ತವನ್ನು ಅವರ ವೇತನದಿಂದ ಸಮಾನ ಕಂತುಗಳಲ್ಲಿ ವಸೂಲಾತಿ ಮಾಡಲು ತೀರ್ಮಾನಿಸಲಾಯಿತು. ಮುಂದುವರಿದು, ಈ ವಿಷಯದ ಬಗ್ಗೆ ಮಾನ್ಯ ನ್ಯಾಯಾಲಯದ ತೀರ್ಪನ್ನು ಕಾಯ್ದಿರಿಸಿ, ಲೆಕ್ಕಪರಿಶೋಧಕರಿಗೆ ಮತ್ತೊಮ್ಮೆ ಮರುಪರಿಶೀಲಿಸಲು ಮಾನವೀಯತೆ ನೆಲೆಯಲ್ಲಿ ವಿಶ್ವವಿದ್ಯಾನಿಲಯದಿಂದ ಪತ್ರ ಬರೆಯಲು ಸಿಂಡಿಕೇಟು ಸಭೆಯು ನಿರ್ಣಯಿಸಿತು. (Arrears to be recovered in equal installments from the salary drawn by the 17 employees due to Audit objections. However, Syndicate members requested the University to write to the Auditors to consider the case as humanitarian grounds subject to outcome of court's decision).

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:30(2018)

**ವಿಷಯ:** 2005–06 ರಿಂದ 2009–10ರ ವರೆಗಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸ್ನಾತಕೋತ್ತರ ವಿದ್ಯಾರ್ಥಿಗಳ ಹೆಚ್ಚುವರಿ ಭೋಜನ ಹಾಗೂ ವಸತಿಯ ಖರ್ಚು ಮರುಭರಣೆಯಾಗದಿರುವ ಬಗ್ಗೆ ಮತ್ತು ವಿಶ್ವವಿದ್ಯಾನಿಲಯದ ಲೆಟರ್‌ಹೆಡ್‌ನ್ನು ಖಾಸಗಿ ವಿಷಯಕ್ಕೆ ಬಳಸಿರುವ ಬಗ್ಗೆ ಇಲಾಖಾ ವಿಚಾರಣೆ – ವಿಚಾರಣಾ ವರದಿಯ ಕುರಿತು.

**ನಿರ್ಣಯ:** ಸಿಂಡಿಕೇಟು ಸಭೆಗೆ ಹೊಸದಾಗಿ ನಾಮನಿರ್ದೇಶನಗೊಂಡ ಸದಸ್ಯರಿಗೆ ಈ ಪ್ರಕರಣದ / ವಾಸ್ತವಾಂಶದ ಅರಿವು ಇಲ್ಲದ ಕಾರಣ ಸದರಿ ವಿಚಾರಣಾ ವರದಿಯನ್ನು ಎಲ್ಲಾ ಸದಸ್ಯರಿಗೆ ವಿತರಿಸಿ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. (Since many of the Syndicate members being new and unaware of the facts about the issue it was decided by the syndicate to provide a copy of the Enquiry Report to all the new members and to be placed before the next Syndicate meeting).

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ ಸಾ.ಸ3:31(2018)

**ವಿಷಯ:** ಶ್ರೀ ಗೋವಿಂದ ಮಟ್ಟಿ, ಹಿರಿಯ ಸಹಾಯಕರು (ಪ್ರಸ್ತುತ ಪ್ರಥಮ ದರ್ಜೆ ಸಹಾಯಕರು) ಇವರು ವರ್ಗಾವಣೆಗೊಂಡ ಕಚೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗದೆ ಅನಧಿಕೃತ ಗೈರುಹಾಜರಿಯಾಗಿರುವ ಬಗ್ಗೆ.

**ನಿರ್ಣಯ:** ಇಲಾಖಾ ವಿಚಾರಣಾಧಿಕಾರಿಯವರು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟು ಸಭೆಯ ಗಮನಕ್ಕೆ ತರಲಾಯಿತು. ಮಾನ್ಯ ಉಚ್ಚನ್ಯಾಯಾಲಯದ ನಿರ್ದೇಶನದಂತೆ ಪ್ರಸ್ತುತ ಈ ಪ್ರಕರಣ ಉಲ್ಲಂಘಿಸದಂತೆ ತೀರ್ಮಾನಿಸಲಾಯಿತು. (Enquiry Report submitted by the Enquiry Officer was brought to the notice of the H'nble Syndicate. However, as per the court directive it was decided not to take any precipitative action as of now).

**ಕಾರ್ಯಸೂಚಿ ಸಂಖ್ಯೆ:** ಸಾರ್ವತ್ರಿಕ ಸಾ.ಸ3:32(2018)

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ SPARSH Cell ನ ವಿಚಾರಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಸಭೆಯ ನಿರ್ಣಯಕ್ಕಾಗಿ.

**ನಿರ್ಣಯ:** ಸುದೀರ್ಘವಾಗಿ/ಕೂಲಂಕುಷವಾಗಿ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದರಿಂದ ಕಾರ್ಯಸೂಚಿಯನ್ನು ಮುಂದೂಡಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/– | ಸಹಿ/– |
| ಕುಲಸಚಿವರು | ಕುಲಪತಿಗಳು |